Universities in the State.

450. SRI S. S. ARAKERI (Ballolli).— Will the Minister for Education be pleased to state :—

(a) the number of Universities in our State ;

(b) the number of Vice Chancellors in those Universities ;

(c) whether there is a S.C. or S.T. Vice Chancellor in any one of the Universities in Karnataka ;

(d) if not the reasons ?

SRI G. B. SHANKARA RAO (Minister for Education).—

(a) Three excluding the University of Agricultural Science.

(b) Three.

(c) No.

(d) Not known as the Vice-Chancellor for each University is appointed by the Chancellor from out of a panel of not less than three persons recommended by a committee consisting of four persons of whom one shall be nominated by the Chancellor, one by the State Government, one by the U.G.C. and one by the Syndicate.

ಶ್ರೀ ಎಸ್. ಎಸ್. ಆರಕೇರಿ.—ಸ್ವಾಮಿ, ನನ್ನ ಪ್ರಶ್ನೆಗೆ ಉತ್ತರವಾಗಿ, ಕರ್ನಾಟಕ ರಾಜ್ಯದಲ್ಲಿರುವ ವಿಶ್ವವಿದ್ಯಾಲಯಗಳ ಸಂಖ್ಯೆ ಎಷ್ಟು ಎಂದು ಕೇಳಿರುವುದಕ್ಕೆ ತಾವು ಮೂರು ಎಂದು ಹೇಳಿದ್ದೀರಿ. ಮತ್ತು ಈ ವಿಶ್ವವಿದ್ಯಾಲಯಗಳಲ್ಲಿರುವ ವೈಸ್‌ಚಾನ್ಸಲರ್ ಅಂದರೆ ಉಪಕುಲಪತಿಗಳ ಸಂಖ್ಯೆ ಎಷ್ಟು ಎಂದು ಕೇಳಿರುವುದಕ್ಕೆ ತಾವು ಅದಕ್ಕೆ ಮೂರು ಎಂದು ಹೇಳಿದ್ದೀರಿ ; ಇಲ್ಲಿ ಮೊದಲನೇ ಪ್ರಶ್ನೆಗೆ ಕೃಷಿ ವಿಶ್ವವಿದ್ಯಾನಿಲಯವನ್ನು ಹೊರತುಪಡಿಸಿ ಮೂರು ಇವೆ ಎಂದು ಹೇಳಿದ್ದೀರಿ. ಅದನ್ನು ಏತಕ್ಕೆ ಹೊರತಾಗಿ ಇಟ್ಟಿದ್ದೀರಿ. ಈ ಯೂನಿವರ್ಸಿಟಿಯ ಬಗ್ಗೆ ನಾವು ಅಸ್ಪೃಶ್ಯತೆಯ ಲೆಕ್ಕಾಚಾರ ಮಾಡಿಕೊಂಡರೆ ಏತಕ್ಕ ಇದರಲ್ಲಿ ತಾರತಮ್ಯ, ಭೇದ ಮಾಡುತ್ತಿದ್ದೀರಿ.

ಶ್ರೀ ಜಿ. ಬಿ. ಶಂಕರರಾವ್.—ಇದರಲ್ಲಿ ಭೇದಭಾವದ ಪ್ರಶ್ನೆ ಇಲ್ಲ. ಅದನ್ನೂ ಸೇರಿಸಿ ನಾವು ಹೇಳಬೇಕಾಗಿತ್ತು, ಅಲ್ಲಿ ಹೇಳಿಲ್ಲ. ಅದನ್ನೂ ಸೇರಿಸಿಕೊಂಡು ತಾವು ೪ ಅಂತ ಅರ್ಥ ಮಾಡಿಕೊಳ್ಳಬೇಕು.

ಶ್ರೀ ಎಸ್. ಎಸ್. ಆರಿಕೇರಿ. — ನಾವು ಅದನ್ನು ಅರ್ಥ ಮಾಡಿಕೊಳ್ಳಬೇಕು ; ಇದು ಏನು ಸೋರಿಸುತ್ತದೆ ಎಂದರೆ ನಿಮ್ಮ ಅಧಿಕಾರಿಗಳು ಸರಿಯಾದ ಉತ್ತರವನ್ನು ಕೊಡಲಾರರು. ಅಂತಹ ಅಧಿಕಾರಿಗಳ ಬಗ್ಗೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ.

ಶ್ರೀ ಜಿ. ಬಿ. ಶಂಕರರಾವ್.—ನಾವು ಕ್ರಮ ತೆಗೆದುಕೊಳ್ಳುತ್ತೇವೆ, ಅದಿರಲಿ, ಉತ್ತರದಲ್ಲಿ ಅದನ್ನೂ ಸೇರಿಸಿಕೊಂಡರೆ ೪ ಎಂದು ಅರ್ಥವಾಗುತ್ತದೆ.

ಶ್ರೀ ಎಸ್. ಎಸ್. ಆರಕೇರಿ.—ನಾವು ಈಗ ಕೃಷಿ ವಿಶ್ವವಿದ್ಯಾನಿಲಯವನ್ನು ಸೇರಿಸಿಕೊಂಡು ೪ ಎಂದು ಅರ್ಥ ಮಾಡಿಕೊಳ್ಳಬೇಕೇ ?

ಶ್ರೀ ಜಿ. ಬಿ. ಶಂಕರರಾವ್.—ಹೌದು, ಅದನ್ನು ಸೇರಿಸಿದರೆ ೪ ಎಂದು ಅರ್ಥವಾಗುತ್ತದೆ.

ಶ್ರೀ ಎಸ್. ಎಸ್. ಆರಿಕೇರಿ.—ಸ್ವಾಮಿ, ನನ್ನ (೫) ಪ್ರಶ್ನೆಗೆ, ಕರ್ನಾಟಕ ರಾಜ್ಯದಲ್ಲಿರುವ ವಿಶ್ವವಿದ್ಯಾಲಯಗಳಲ್ಲೊ ಒಂದರಲ್ಲಾದರೂ ಅನುಸೂಚಿತ ಜಾತಿ ಅಥವಾ ಅನುಸೂಚಿತ ಅಧಿಮ ಜಾತಿಯ ಉಪಕುಲಪತಿಗಳು ಇದ್ದಾರೆಯೇ ಎಂದು ಕೇಳಿರುವುದಕ್ಕೆ ಇಲ್ಲ ಎಂದು ತಾವು ಉತ್ತರ ಹೇಳಿದ್ದೀರಿ.

ಅದಕ್ಕೆ ಕಾರಣಗಳೇನು ಎಂದು ಕೇಳಿರುವುದಕ್ಕೆ ತಾವು ಗೊತ್ತಿಲ್ಲ ಎಂದು ಹೇಳಿದ್ದೀರಿ. ಅದಕೆ ಇದು ಸರಿಯಾದ ಉತ್ತರವಲ್ಲ. ಕರ್ನಾಟಕ ರಾಜ್ಯದಲ್ಲಿರತಕ್ಕಂಥ ೪ ಯೂನಿವರ್ಸಿಟಿಗಳಲ್ಲಿ ಒಂದಾದರೂ ಯೂನಿವರ್ಸಿಟಿಯಲ್ಲಿ ವೈಸ್‌ಚಾನ್ಸಲರ್ ಹುದ್ದೆಯನ್ನು ಷೆಡ್ಯೂಲ್ಡ್ ಕ್ಯಾಸ್ಟ್ಸ್ ಮತ್ತು ಷೆಡ್ಯೂಲ್ಡ್ ಟ್ರೈಬ್‌ನವರಿಗೆ ಕೊಟ್ಟಿಲ್ಲ. ಅವರಿಗೆ ಏತಕ್ಕೆ ಕೊಟ್ಟಿಲ್ಲ ಎನ್ನುವುದಕ್ಕೆ ನಿಜವಾದ ಕಾರಣವೇನು ಎಂಬುದನ್ನು ಸ್ಪಷ್ಟವಾಗಿ ತಿಳಿಸುತ್ತೀರಾ ?

ಶ್ರೀ ಜಿ. ಬಿ. ಶಂಕರರಾವ್ —ಸ್ವಾಮಿ, ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು. ಅವರ (೩) ಪ್ರಶ್ನೆಗೆ ಕೊಟ್ಟಿರತಕ್ಕಂಥ ಉತ್ತರ ಸರಿ ಇದೆ ಅವರು ಪ್ರಶ್ನೆಗೆ ಉತ್ತರವಾಗಿ ನಾನು 'ಇಲ್ಲ' ಎಂದು ಹೇಳಿದ್ದೇನೆ. ಅಂದರೆ ಕರ್ನಾಟಕ ರಾಜ್ಯದಲ್ಲಿರುವ ವಿಶ್ವವಿದ್ಯಾನಿಲಯಗಳಲ್ಲಿ ಈ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ಗೆ ಸೇರಿದಂಥವರು ಯಾರೂ ಇಲ್ಲ, ಏತಕ್ಕೆಂದರೆ ನಾವು ವೈಸ್‌ಚಾನ್ಸಲರನ್ನು ಅಪಾಯಿಂಟ್ ಮಾಡುವುದಿಲ್ಲ. ವೈಸ್‌ಚಾನ್ಸಲರನ್ನು ಚಾನ್ಸಲರ್‌ರವರು ಅಪಾಯಿಂಟ್ ಮಾಡುತ್ತಾರೆ. ಆದ್ದರಿಂದ ಅವರನ್ನು ಏತಕ್ಕೆ ಅಲ್ಲಿ ಅಪಾಯಿಂಟ್ ಮಾಡಲಿಲ್ಲ ಎಂದು ಹೇಳುವುದು ಕಷ್ಟವಾಗುತ್ತದೆ.

ಶ್ರೀ ಮಳ್ಳೂರ್ ಆನಂದರಾವ್.—ಸ್ವಾಮಿ, ವೈಸ್‌ಚಾನ್ಸಲರನ್ನು ನೇಮಕ ಮಾಡುವ ಬಗ್ಗೆ ಅವರು ಏನೊಂದು ಪದ್ಧತಿಯನ್ನು ಅನುಸರಿಸುತ್ತಿದ್ದಾರೆಯೋ ಅದರ ಬಗ್ಗೆ ಇದರಲ್ಲಿ ಮಾನ್ಯ ಮಂತ್ರಿಯವರು ಹೇಳಿದ್ದಾರೆ. ಆದರೆ ಈ ಪದ್ಧತಿಯು ಮೂಲಕ ಹರಿಜನರು ಗಿರಿಜನರು ಮತ್ತು ಹಿಂದುಳಿದ ವರ್ಗದವರು ಅಲ್ಲಿ ವೈಸ್‌ಚಾನ್ಸಲರ್ ಆಗಿ ಬರುವುದಕ್ಕೆ ಸಾಧ್ಯವಿಲ್ಲ ಇದರಲ್ಲಿ ರಿಸರ್ವೇಷನ್ ಪ್ರೊಪೀಜರನ್ನು ಅಳವಡಿಸಿ ಅವರನ್ನು ಅಪಾಯಿಂಟ್ ಮಾಡುವುದಕ್ಕೆ ಬರುವುದಿಲ್ಲ. ಈ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಹಾಗೂ ಹಿಂದುಳಿದ ವರ್ಗಗಳಲ್ಲಿ ಪ್ರತಿಭಾವಂತರು ಯಾರಿದ್ದಾರೆ ಅವರು ಅದರ ಮೂಲಕ ವೈಸ್‌ಚಾನ್ಸಲರ್ ಆಗಿ ಬರುವುದಕ್ಕೆ ಅನುಕೂಲವಾಗುವಂತೆ ಈಗಿರತಕ್ಕಂಥ ಪದ್ಧತಿಯಲ್ಲಿ ಅಥವಾ ಕ್ರಮದಲ್ಲಿ ಏನಾದರೂ ತಿದ್ದುಪಡಿ ಮಾಡುವುದಕ್ಕೆ ಸಾಧ್ಯವಿದೆಯೇ ?

ಶ್ರೀ ಜಿ. ಬಿ. ಶಂಕರರಾವ್.—ಈ ವೈಸ್‌ಚಾನ್ಸಲರನ್ನು ನಾವು ನೇಮಕ ಮಾಡಿವುದಿಲ್ಲ, ಕುಲಪತಿಗಳು ನೇಮಕ ಮಾಡುತ್ತಾರೆ. ಹೀಗೆ ಮಾಡಿ ಎಂದು ನಾವು ಕುಲಪತಿಗಳಿಗೆ ಸಲಹೆಯನ್ನು ಕೊಡುತ್ತೇವೆ.

ಶ್ರೀ ಮಳ್ಳೂರು ಆನಂದರಾವ್.—ಸ್ವಾಮಿ, ಮಾನ್ಯ ವಿದ್ಯಾಮಂತ್ರಿಯವರು ನನ್ನ ಪ್ರಶ್ನೆಯನ್ನು ಅರ್ಥ ಮಾಡಿಕೊಳ್ಳಲಿಲ್ಲ. ಕುಲಪತಿಯವರು ಉಪಕುಲಪತಿಯವರನ್ನು ನೇಮಕ ಮಾಡತಕ್ಕಂಥಾದ್ದು ನಮಗೆ ಗೊತ್ತಿದೆ. ಅದಕ್ಕೆ ಒಂದು ನಿಯಮ ಇದೆ ಏನೆಂದರೆ ನಾಲ್ಕು ಜನರಿರುವ ಸಮಿತಿಯಲ್ಲಿ ಮೂವರಿಗೂ ಕಡಿಮೆ ಇಲ್ಲದಂಥೆ ಶಿಫಾರಸ್ಸು ಮಾಡಿದ ವ್ಯಕ್ತಿಯನ್ನು ಪ್ರತಿ ವಿಶ್ವವಿದ್ಯಾಲಯದ ಉಪಕುಲಪತಿಯವರನ್ನಾಗಿ ಕುಲಪತಿಯವರು ನೇಮಿಸುವುದಕ್ಕೆ ಪ್ರಾವಿಷನ್ ಮಾಡಿದ್ದಾರೆ. ಕುಲಪತಿಯವರು ಉಪಕುಲಪತಿಯವರನ್ನು ನೇಮಕ ಮಾಡತಕ್ಕಂಥ ಕಾಲದಲ್ಲಿ ಷಡ್ಯೂಲ್ಡ್ ಕ್ಯಾಸ್ಟ್ಸ್ ಸೇರಿರತಕ್ಕಂಥ ಒಬ್ಬ ವ್ಯಕ್ತಿಯನ್ನು ಪರಿಗಣನೆಗೆ ತೆಗೆದುಕೊಂಡು ಅವರನ್ನು ವೈಸ್‌ಚಾನ್ಸಲರ್ ಮಾಡಬೇಕು ಎಂಬುದಾಗಿ ಈಗಿರತಕ್ಕಂಥ ಕ್ರಮದಲ್ಲಿ ತಿದ್ದುಪಡಿ ಮಾಡಿದರೆ ಯಾರ್ಯಾರು ವೈಸ್‌ಚಾನ್ಸಲರ್ ಹುದ್ದೆಗೆ ಹೆಸರುಗಳನ್ನು ನಮೂದು ಮಾಡಿಸಿರುತ್ತಾರೆ ಅಂತಹವರ ಮಧ್ಯೆ ಈ ಷೆಡ್ಯೂಲ್ಡ್ ಕ್ಯಾಸ್ಟ್ಸ್‌ಗೆ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ಗೆ ಸೇರಿದಂಥ ವ್ಯಕ್ತಿಯನ್ನು ಸೇರಿಸುವುದಕ್ಕೆ ಅವಕಾಶ ಇರುತ್ತದೆ ಮತ್ತು ಅವರಿಗೆ ವೈಸ್‌ಚಾನ್ಸಲರನ್ನಾಗಿ ಮಾಡುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ತಿದ್ದುಪಡಿ ಈಗಿರತಕ್ಕಂಥ ಕ್ರಮದಲ್ಲಿ ತಿದ್ದುಪಡಿ ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಜಿ. ಬಿ. ಶಂಕರರಾವ್.—ಸ್ವಾಮಿ. ಸರ್ಕಾರದಿಂದ ಕುಲಪತಿಗಳ ಕಡೆಗೆ ನಾವು ೩ ಜನರ ಒಂದು ಪ್ಯಾನಲ್ ಅನ್ನು ಕಳಿಸಬೇಕು ಎಂದು ಇದೆ. ಆ ಪ್ಯಾನಲ್‌ನಲ್ಲಿ ಈ ಷೆಡ್ಯೂಲ್ಡ್ ಕ್ಯಾಸ್ಟ್ಸ್‌ಗೆ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ಗೆ ಸೇರಿದವರನ್ನು ಹಾಕಬೇಕು ಎಂದು ಮಾನ್ಯ ಸದಸ್ಯರ ಅಭಿಪ್ರಾಯ ಇರುವ ಹಾಗೆ ಕಾಣುತ್ತದೆ. ಆ ಅಭಿಪ್ರಾಯವನ್ನು ನಾವು ಸಮಿತಿಯವರಿಗೆ ತಿಳಿಸುತ್ತೇವೆ.

ಶ್ರೀ ಎಸ್. ಎಸ್. ಆರಕೇರಿ —ಸ್ವಾಮಿ, ಮಾನ್ಯ ಮಂತ್ರಿಯವರು ಪ್ಯಾನಲ್ ಅನ್ನು ತಯಾರು ಮಾಡುವುದಕ್ಕೆ ೪ ಜನರಿರುವ ಒಂದು ಸಮಿತಿ ಇರುತ್ತದೆ, ಅವರು ೩ ಜನರ ಒಂದು ಪ್ಯಾನಲ್ ಅನ್ನು ಕಳುಹಿಸಬೇಕು ಎಂದು ಇದೆ ಎಂಬುದಾಗಿ ಹೇಳಿದರು. ಕುಲಪತಿಯವರಿಂದ ಒಬ್ಬರು, ರಾಜ್ಯ ಸರ್ಕಾರದವರಿಂದ ಒಬ್ಬರು, ವಿಶ್ವವಿದ್ಯಾನಿಲಯಗಳ ಅನುದಾನ ಸಮಿತಿಯಿಂದ ಒಬ್ಬರು ಹಾಗೂ ಸಿಂಡಿಕೇಟ್

ನಿಂದ ನಾಮ ನಿರ್ದೇಶನ ಹೊಂದಿದ ನಾಲ್ಕು ಜನರ ಕಮಿಟಿ ಏನಿದೆ ಅವರು ೩ ಮಂದಿಯ ಪ್ಯಾನಲ್ ಅನ್ನು ಕಳಿಸಿದ ಮೇಲೆ ಆ ೩ ಮಂದಿಯಲ್ಲಿ ಒಬ್ಬರನ್ನು ಕುಲಪತಿಯವರು ಉಪಕುಲಪತಿಯನ್ನಾಗಿ ಮಾಡುತ್ತಾರೆ ಎಂದು ಅವರು ಹೇಳಿದ್ದಾರೆ. ಈಗ ಆ ಜನರ ಕಮಿಟಿಯಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್‌ಗೆ ಸೇರಿದಂಥ ಒಬ್ಬ ವ್ಯಕ್ತಿಯಾದರೂ ಇದ್ದಾರೆಯೋ ? ಅಲ್ಲಿ ಇಲ್ಲದಿದ್ದರೆ ಆ ಕಮಿಟಿಯಲ್ಲಿ ಒಬ್ಬರನ್ನು ಹಾಕುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಜಿ. ಬಿ. ಶಂಕರರಾವ್.—ಆ ಕಮಿಟಿಗೆ ರಾಜ್ಯ ಸರ್ಕಾರದವರು ಒಬ್ಬರನ್ನು ನೇಮಿಸುತ್ತಾರೆ ಹಾಗೆ ನೇಮಿಸುವಾಗ ಷೆಡ್ಯೂಲ್ಡ್ ಕ್ಯಾಸ್ಟ್‌ಗೆ ಸೇರಿದ ಅಥವಾ ಷೆಡ್ಯೂಲ್ಡ್ ಟ್ರೈಬ್‌ಗೆ ಸೇರಿದ ಒಬ್ಬ ವ್ಯಕ್ತಿಯನ್ನು ಕಮಿಟಿಗೆ ನೇಮಿಸಬೇಕು ಎಂದು ಮಾನ್ಯ ಸದಸ್ಯರ ಅಭಿಪ್ರಾಯ ಇದ್ದರೆ ಅದನ್ನು ಸರ್ಕಾರ ಪರಿಶೀಲನೆ ಮಾಡುತ್ತದೆ.

SRI C. M. ARMUGHAM.—Sir, in your answer you have stated that there are 4 Universities in our State. There is a proposal to establish two more Universities, *ie.*, one at Mangalore and another in Gulbarga. Will the Government appraise the Chancellor to appoint a Scheduled Caste man as the Vice-Chancellor in one of the Universities ?

SRI G. B. SHANKAR RAO.— I will convey ths views expressed by the Hon. Members of this House to the Chancellor in this regard.

ಶ್ರೀ ಎಸ್. ಎಸ್. ಅರಿಕೇರಿ —ಸ್ವಾಮಿ, ಕರ್ನಾಟಕ ರಾಜ್ಯದಲ್ಲಿರುವ ೪ ಯೂನಿವರ್ಸಿಟಿಗಳಲ್ಲಿ ಒಂದರಲ್ಲಾದರೂ ಕೂಡ ವೈಸ್‌ಚಾನ್ಸಲರ್ ಅಥವಾ ಉಪಕುಲಪತಿಯವರು ಹುದ್ದೆಯನ್ನು ಇಲ್ಲಿಯವರೆಗೆ ಹರಿಜನಗಿರಿಜನರಿಗೆ ಕೊಡದೇ ಇರುವುದು ನಿಜವಾಗಿಯೂ ವಿಷಾದಕರ ಸಂಗತಿ. ಇವತ್ತು ಕರ್ನಾಟಕ ಯೂನಿವರ್ಸಿಟಿಯಲ್ಲಿ ಶ್ರೀ ಒಡೆಯರ ರವರು ಉಪಕುಲಪತಿಗಳಾಗಿದ್ದಾರೆ; ಹಿಂದೆ ಆ ಯೂನಿವರ್ಸಿಟಿ ಬಹಳ ಸ್ಟ್ಯಾಂಡರ್ಡ್ ಯೂನಿವರ್ಸಿಟಿ ಆಗಿತ್ತು, ಇವತ್ತು ಅದು ಹಾಳಾಗಿದೆ, ಇವತ್ತು ಶ್ರೀ ಟಿ. ಆರ್. ಜಯರಾಮನ್ ಉಪಕುಲಪತಿಗಳಾಗಿರುವ ಬೆಂಗಳೂರು ಯೂನಿವರ್ಸಿಟಿ ಸ್ಟ್ಯಾಂಡರ್ಡ್ ಯೂನಿವರ್ಸಿಟಿಯಾಗಿ ಉಳಿದಿಲ್ಲ. ಇವರಿಗಿಂತಲೂ ಪ್ರತಿಭಾವಂತರಾದವರು, ಬುದ್ಧಿವಂತರಾದವರು ನಮ್ಮ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನಲ್ಲಿ, ಇದ್ದಾರೆ. ಇಂತಹವರನ್ನು ರಾಜ್ಯದಲ್ಲಿರತಕ್ಕಂಥ ೪ ಯೂನಿವರ್ಸಿಟಿಗಳಲ್ಲಿ ಒಂದಕ್ಕಾದರೂ ಉಪಕುಲಪತಿಗಳಾಗಿ ನೇಮಕ ಮಾಡಿಲ್ಲ. ರಾಜ್ಯಾಂಗದತ್ತವಾಗಿರತಕ್ಕಂಥ ಈ ಸವಲತ್ತನ್ನು ಉದ್ದೇಶ ಪೂರ್ವಕವಾಗಿ ಈ ಹರಿಜನಗಿರಿಜನರಿಗೆ ಕೊಡಲಾರದೆ ಸರ್ಕಾರ ಅಸ್ಪೃಶ್ಯತೆಯ ಆಚರಣೆ ಮಾಡುತ್ತಿದೆ ಎಂದು ನಾನು ಆಪಾದನೆ ಮಾಡುತ್ತೇನೆ. ಇದಕ್ಕೆ ನೀವು ಏನು ಹೇಳುತ್ತೀರಿ ?

ಶ್ರೀ ಜಿ. ಬಿ. ಶಂಕರರಾವ್.—ಚಾನ್ಸಲರ್‌ರವರು ವೈಸ್‌ಚಾನ್ಸಲರನ್ನು ನೇಮಕ ಮಾಡುವಾಗ ಆದಷ್ಟು ಮೆನ್ ಆಫ್ ಎಮಿನೆನ್ಸ್, ಆದಂತಹವರನ್ನೇ ನೋಡಿ ನೇಮಕ ಮಾಡುತ್ತಾರೆ. ನಾವು ಅವರಿಗೆ ೩ ಜನರ ಒಂದು ಪ್ಯಾನಲ್ ಕಳಿಸುವಾಗಲೂ ಕೂಡ ಅರ್ಹ ವ್ಯಕ್ತಿಗಳನ್ನು ಆರಿಸಿ, ಇಂತಹವರನ್ನು ನೇಮಕ ಮಾಡಿ ಎಂದು ಹೇಳಿ ಒಂದು ಪ್ಯಾನಲ್ ಅನ್ನು ಕಳಿಸುತ್ತೇವೆ. ಆದರಲ್ಲೂ ಅವರು ವಿಚಾರ ಮಾಡಿ ಹೆಚ್ಚಿನ ಅರ್ಹತೆಯುಳ್ಳವರನ್ನೇ ಉಪಕುಲಪತಿಗಳನ್ನಾಗಿ ನೇಮಕ ಮಾಡುತ್ತಾರೆ. ಅರ್ಹತೆಯುಳ್ಳವರನ್ನೇ ನೇಮಕ ಮಾಡಬೇಕು ಎನ್ನುವ ಅಭಿಪ್ರಾಯ ಕುಲಪತಿಗಳಿಗೆ ಇದೆ. ಅದನ್ನು ನಾವು ಗಮನದಲ್ಲಿಟ್ಟುಕೊಂಡು ಅಂತಹ ಅರ್ಹರಾದ ವ್ಯಕ್ತಿಗಳು ಈ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನಲ್ಲಿ ಸಿಕ್ಕಿದರೆ ನಾವು ಅವರ ಹೆಸರನ್ನು ಕಳಿಸಿಯೇ ಕಳಿಸುತ್ತೇವೆ. ಇದರಲ್ಲಿ ಜಾತಿಯ ಪ್ರಶ್ನೆ ಇಲ್ಲ. ಯೂನಿವರ್ಸಿಟಿಗಳಲ್ಲಿ ಅಕಾಡೆಮಿಕ್ ಸ್ಟ್ಯಾಂಡರ್ಡ್ ಮೈನ್‌ಟೈನ್ ಮಾಡಬೇಕಾಗಿದ್ದರೆ ಮೆನ್ ಆಫ್ ಎಮಿನೆನ್ಸ್ ಆದಂತಹವರನ್ನೇ ನೇಮಕ ಮಾಡಬೇಕಾಗಿರುತ್ತದೆ ಇನ್ನು ಮುಂದೆ, ಯೂನಿವರ್ಸಿಟಿಗಳಿಗೆ ಮೆನ್ ಆಫ್ ಎಮಿನೆನ್ಸ್ ಆದಂತಹವರನ್ನೇ ನೇಮಕ ಮಾಡಬೇಕೆಂದು ಹೇಳಿ ನಾವು ಕುಲಪತಿಗಳಿಗೆ ಸೂಕ್ತ ಸಲಹೆಯನ್ನು ಕೊಡುತ್ತೇವೆ.

ಶ್ರೀ ಬಿ. ಬಸವಲಿಂಗಪ್ಪ.—ಸ್ವಾಮಿ, ಮೆನ್ ಆಫ್ ಎಮಿನೆನ್ಸ್ ಆದಂತಹವರನ್ನು ಇವರೇ ಕಂಡುಹಿಡಿಯಬೇಕು; ಅವರು ಎಷ್ಟೇ ಎಮಿನೆನ್ಸ್ ಆಗಿರಬಹುದು, ಅವರ ಅರ್ಹತೆಯನ್ನು ತೂಕ ಮಾಡುವುದಕ್ಕೆ ಬರುತ್ತದೆಯೇ ? ಶ್ರೀ ಟಿ. ಆರ್. ಜಯರಾಮನ್‌ರವರು ಬೆಂಗಳೂರು ಯೂನಿವರ್ಸಿಟಿಯಲ್ಲಿ ವೈಸ್‌ಚಾನ್ಸಲರ್ ಆಗಿದ್ದಾರೆ, ಅವರು ನಮ್ಮ ಹತ್ತಿರ ಅಧಿಕಾರಿಗಳಾಗಿದ್ದರು. ಅವರ ವಿಷಯ ನಮಗೆಲ್ಲಾ ಗೊತ್ತಿದೆ. ಆವರ ಎಮಿನೆನ್ಸ್‌ನ್ನು ತಕ್ಕಡಿಯಲ್ಲಿ ಇಟ್ಟು ಏನಾದರೂ ತೂಕ ಮಾಡಿದ್ದೀರಾ ? ಧಾರವಾಡದ ಕರ್ನಾಟಕ ಯೂನಿವರ್ಸಿಟಿಯಲ್ಲಿ ಶ್ರೀ ಓಡೆಯರ್‌ರವನ್ನು ವೈಸ್‌ಚಾನ್ಸಲರನ್ನಾಗಿ ಮಾಡಿದ್ದೀರಿ. ಅವರ ಅರ್ಹತೆಯನ್ನು ಯಾವ ತಕ್ಕಡಿಯಲ್ಲಿ ತೂಕ ಮಾಡಿದ್ದೀರಿ ? ಇರತಕ್ಕಂಥ ೪ ಯೂನಿವರ್ಸಿಟಿಗಳಲ್ಲಿ ಎಷ್ಟು ಜನ ಹರಿಜನರನ್ನು ಉಪಕುಲಪತಿಗಳನ್ನಾಗಿ ಮಾಡಿದ್ದೀರಿ ? ಕೆಲವು ಜಾತಿಗಳವರನ್ನೇ ಅಲ್ಲಿ ಉಪಕುಲಪತಿಗಳನ್ನಾಗಿ ನೇಮಕ ಮಾಡುತ್ತಿದ್ದೀರಿ. ಇದಕ್ಕೆ ಎಮಿನೆನ್ಸ್ ಎಂದು ಹೇಳುತ್ತೀರಾ ? ಹಾಗೆ ಮಾಡಿದರೆ ಎಮಿನೆನ್ಸ್ ಆಗುತ್ತದೆಯೇ ? ಅಂತಹವರಲ್ಲಿ ಎಮಿನೆನ್ಸ್ ಇಲ್ಲದೇ ಹೋದರೆ ಅವರನ್ನು ಅಲ್ಲಿಂದ ತೆಗೆಯುವುದಕ್ಕೆ ಪ್ರಯತ್ನ ಮಾಡುತ್ತೀರಾ ? ಅಂತಹವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಜಿ. ಬಿ. ಶಂಕರರಾವ್.—ಮಾನ್ಯ ಬಸವಲಿಂಗಪ್ಪನವರು ಸೆನೆಟ್ ಮತ್ತು ಸಿಂಡಿಕೇಟ್‌ನಲ್ಲಿದವರು ಅವರಿಗೆ ಗೊತ್ತಿದೆ. ಉಪಕುಲಪತಿಗಳನ್ನು ಸರ್ಕಾರ ನೇಮಕ ಮಾಡುವುದಿಲ್ಲ ರಾಜ್ಯಪಾಲರು ನೇಮಕ ಮಾಡುತ್ತಾರೆ. ಬೋರ್ಡು ಇರುತ್ತೆ, ಅಪ್ರೂವಲ್‌ಗೆ ಕಳುಹಿಸಿಕೊಡುತ್ತಾರೆ. ಶ್ರೀಮಾನ್ ಜಯರಾಮನ್ ಮತ್ತು ಓಡೆಯರ್ ಅವರ ಬಗ್ಗೆ ಅಲ್ಲಿ ಆ ಪಾದನೆ ಮಾಡುವುದು ಸೂಕ್ತವಲ್ಲ, ಕಾರಣ ಅವರು ಈ ಮನೆಯ ಸದಸ್ಯರುಗಳಲ್ಲ, ಡಿಪೆಂಡ್ ಮಾಡಿಕೊಳ್ಳುವುದಕ್ಕೆ ಅವರಿಗೆ ಆಗುವುದಿಲ್ಲ. ವಿಶ್ವವಿದ್ಯಾನಿಲಯಗಳ ಗುಣಮಟ್ಟ ಬಹಳ ಕೆಳಮಟ್ಟಕ್ಕೆ ಹೋಗಿದೆ ಎಂದು ಹೇಳುತ್ತಿದ್ದೀರಿ, ನೀವೇ ಹೆಸರು ಕಳುಹಿಸಿ ಕುಲಪತಿಗಳಿಂದ ನೇಮಕ ಮಾಡಿಸಿದಿರಿ, ಅದನ್ನು ನನ್ನ ತಲೆಗೆ ಕಟ್ಟಿದರೆ ಹೇಗೆ ?

ಶ್ರೀ ಎಸ್. ಎಸ್. ಅರಕೇರಿ.—ಮಾನ್ಯ ಮಂತ್ರಿಗಳು ಪ್ರತಿಯೊಂದನ್ನು ಕುಲಪತಿಗಳ ಮೇಲೆ ಹಾಕುತ್ತಿದ್ದಾರೆ. ಮೆನ್ ಆಫ್ ಎಮಿನೆನ್ಸ್ ಇದೆ ಎಂಬುದನ್ನು ಜಾತೀಯ ಭಾವನೆಯಿಂದ, ಮತದ ಭಾವನೆಯಿಂದ ಕಂಡುಹಿಡಿಯುತ್ತೀರಾ ? ಉದಾಹರಣೆಗೆ ಹರಿಜನರಲ್ಲಿ ಡಾ॥ ನಾರಾಯಣಸ್ವಾಮಿ, ವೈ. ಪಿ. ರುದ್ರಪ್ಪ, ಸೆಲ್ವಿದಾನ್ ಮುಂತಾದವರು ಇದ್ದಾರೆ. ಮೆನ್ ಆಫ್ ಎಮಿನೆನ್ಸ್ ದೃಷ್ಟಿಯಿಂದ ಇವರುಗಳನ್ನು ವೈಸ್‌ಚಾನ್ಸಲರುಗಳಾಗಿ ನೇಮಕ ಮಾಡುತ್ತಿರಾ ?

ಶ್ರೀ ಜಿ. ಬಿ. ಶಂಕರರಾವ್.—ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳಲ್ಲಿ ಒಳ್ಳೆಯವರು ಇದ್ದಾರೆ. ಅದರ ಬಗ್ಗೆ ದ್ವೇಷ ಭಾವನೆಯಿಲ್ಲ. ಮಾನ್ಯ ಸದಸ್ಯರುಗಳು ಹೇಳಿದಂತೆ ವ್ಯಕ್ತಿಗಳನ್ನು ಮಾನ್ಯ ಬಸವಲಿಂಗಪ್ಪನವರೇ ಮಾಡಿಸಬಹುದಾಗಿತ್ತು.

ಅಧ್ಯಕ್ಷರು.—ಮಾಡುತ್ತೇವೆಂದು ಹೇಳಿ,

ಪ್ರಶ್ನೆ : ೪೭೭ ಮತ್ತು ೪೮೬ನ್ನು ಮಾನ್ಯ ಮುಖ್ಯಮಂತ್ರಿಗಳು ಊರಿನಲ್ಲಿ ಇಲ್ಲದೇ ಇರುವುದರಿಂದ ತಡೆಹಿಡಿಯಲಾಗಿದೆ.

ಶ್ರೀ ಎಂ. ಫಾಡಿ.—ನನ್ನ ಕೆಲವು ಪ್ರಶ್ನೆಗಳಿಗೆ ಉತ್ತರವನ್ನೇ ಕೊಟ್ಟಿಲ್ಲ.

ಶ್ರೀ ಎಸ್. ಬಂಗಾರಪ್ಪ.—ತಾವು ಕಳುಹಿಸಿರುವ ಪ್ರಶ್ನೆಗೆ ಸರಿಯಾಗಿ ಉತ್ತರ ಕೊಟ್ಟಿಲ್ಲ ಅಂದರೆ, ದಯಮಾಡಿ ತಮ್ಮ ಹತ್ತಿರ ಬಂದು ಮಾತನಾಡಲಿ.

ಅಧ್ಯಕ್ಷರು.—ಆಗಬಹುದು.

Land for Stadium to Bangalore City for Volley Ball

562. SRI A. LAKSHMISAGAR (Chickpet).—Will the Minister of State for Youth Services and Sericulture be pleased to state :—

(a) whether the Karnataka Volley Ball Association has approached the Government to provide suitable land within Bangalore City Corporation limits, fore coustrution of a Stadium for playing Volley Ball ;